# ಪ್ರಸ್ತಾಪನೆ

**1. ದೇಶ ಮತ್ತು ಜನಾಂಗ.**-ಈಗ ನಾವು ಶೋಧಿಸುವ ಕಥೆಯು ನಮ್ಮನ್ನು ಕೆಲ ಸಮಯ ಪರಿಚಿತವಾಗಿ ಬೆಳೆದ ನೆಲದ ಮೇಲೆ ಮತ್ತು ಹಳೇ ಒಡಂಬಡಿಕೆಯ ಪಿತೃಗಳೊಂದಿಗೆ, ಅರಸರೊಂದಗೆ ಹಾಗೂ ಪ್ರವಾದಿಗಳೊಂದಿಗೆ ಸಂಬಂಧಿಸಿ ಹದಿನೈದು ಶತಮಾನಗಳ ಮುಖಾಂತರ ಪರಿಶುದ್ಧವಾದ ನೆಲದ ಮೇಲೆ ಇಡುವುದು. ನೈಸರ್ಗಿಕವಾದ ದೃಶ್ಯವು ಅಬ್ರಹಾಮನು ತನ್ನ ಡೇರೆಯನ್ನು ಶೆಕೆಮ್‌ದಲ್ಲಿ ಹಾಕಿದ್ದಾಗಿನಂತೆಯೇ ಇರುವುದು; ಉಳಿದ ಎಲ್ಲವೂ ಬದಲಾಗಿರುವುದು. ಪುರಾತನ ಜನಾಂಗಗಳು ಮತ್ತು ಪಟ್ಟಣಗಳು ಕಾಣೆಯಾಗಿರುವವು ಇಲ್ಲವೇ ಹಿನ್ನೆಲೆಯಲ್ಲಿ ಬಿದ್ದು ಹೋಗಿರುವವು; ನೂತನ ಜನಾಂಗಗಳೂ ಪಟ್ಟಣಗಳೂ ಮುಂದಕ್ಕೆ ಬಂದಿರುವವು. ಕಾನಾನ್ ಪಲೆಸ್ತಿನ್ ಆಗಿರುವುದು, ಈ ಹೆಸರು ಫಿಲಿಷ್ಟಿಯರಿಂದ ಬಂದಿರುವುದು. ಆಯ್ದುಕೊಂಡ ಜನಾಂಗದ ಹೆಸರುಗಳು ಅವರ ಜನಾಂಗಿಕ ಜೀವನದ ವಿವಿಧ ಹಂತಗಳೊಂದಿಗೆ ಭಿನ್ನವಾಗಿರುವವು. ಅತೀ ಪುರಾತನ ಹೆಸರು, ಹಿಬ್ರೂ ಎಂಬುದು ಇಂದಿಗೆ ಅವರನ್ನು ಅಂಟಿಕೊಂಡಿರುವುದು. ಇಸ್ರಾಯೇಲ್ ಎಂಬ ಮಾತು, ಯಾಕೋಬನ ಸಮಯದಿಂದ ಮುಂದೆ ಉಪಯೋಗಿಸಲ್ಪಟ್ಟಿದ್ದು, ರೆಹೊಬ್ಬಾಮನ ಆಳ್ವಿಕೆಯಲ್ಲಾದ ವಿಭಜನೆಯ ನಂತರ ಉತ್ತರ ರಾಜ್ಯಕ್ಕೆ ಅನ್ವಯಿಸಲ್ಪಟ್ಟಿತು; ಜ್ಯೂ ಎಂಬ ಮಾತು, ಯೆಹೂದನಿಂದ ಬಂದದ್ದು ಅನಂತರದ ಹಳೇ ಒಡಂಬಡಿಕೆಯಲ್ಲೆಲ್ಲಾ ಹಾಗೂ ಹೊಸ ಒಡಂಬಡಿಕೆಯ ಅವಧಿಯಲ್ಲಿ ಸಾಮಾನ್ಯವಾದ ಜನಾಂಗಿಕ ಹೆಸರಾಯಿತು. ಮೊದಲಿನ ದಿನಗಳಲ್ಲಿದ್ದಂತೆ ಜನಾಂಗವು ಪ್ರತ್ಯೇಕವಾಗಿ ಇಡಲ್ಪಟ್ಟಿರುವುದಿಲ್ಲ. ಜೀವನವು ಸಂಕೀರ್ಣವಾಗಿ ಬೆಳೆದಿರುತ್ತದೆ. ಅನೇಕ ಹೊಸ ಪ್ರವೃತ್ತಿಗಳು ಅದರೊಳಗೆ ಹರಿದು ಬಂದಿವೆ. ಒಬ್ಬ ರೋಮನ್ ಅಧಿಪತಿಯು ಹೊಸ ರಾಜಧಾನಿ ಕೈಸರೆಯದಲ್ಲಿ ತನ್ನ ದರ್ಬಾರನ್ನು ನಡಿಸುತ್ತಾನೆ, ಅಥವಾ ಹಳೇ ಪರಿಶುದ್ಧ ಪಟ್ಟಣ ಯೆರೂಸಲೇಮಿನಲ್ಲಿ ನಡಿಸುತ್ತಾನೆ. ರೋಮನ್ ಸೈನಿಕರು ಹಾಗೂ ರೋಮನ್ ಸುಂಕವಸೂಲು ಮಾಡುವವರು ಎಲ್ಲೆಲಿಯೂ ಇದ್ದಾರೆ. ಪುರಾತನ ಹಿಬ್ರೂ ಭಾಷೆಯು ಶಾಲೆಗಳ ಪರಿಶುದ್ಧ ಭಾಷೆಯಾಗಿದೆ, ಮತ್ತು ಆಧುನಿಕ ಇಟ್ಯಾಲಿಯನ್ ಬಾಲಕನು ಲ್ಯಾಟಿನ್ ಭಾಷೆಯನ್ನು ಕಲಿಯುವಂತೆ ಆ ಭಾಷೆಯು ಕಲಿಯಲ್ಪಡತಕ್ಕದ್ದು. ಅರಮಾಯ ಭಾಷೆಯು ಸ್ಥಳೀಯ ನಿವಾಸಿಗಳ ಸಾಮಾನ್ಯ ಭಾಷೆಯಾಗಿದೆ. ಮತ್ತು ಲ್ಯಾಟಿನ್ ಭಾಷೆಯು ಅಧಿಕಾರಿ ವರ್ಗದವರ ಭಾಷೆಯಾಗಿದೆ.

**2. ಪಾಲೆಸ್ತೀನಿನ ಐದು ವಿಭಾಗಗಳು.**-ಹೊಸ ಒಡಂಬಡಿಕೆಯ ಸಮಯಗಳಲ್ಲಿ ಪಲೆಸ್ತೀನ ದೇಶವು ಐದು ಜಿಲ್ಲೆಗಳಲ್ಲಿ ವಿಭಾಗಿಸಲ್ಪಟ್ಟಿತು; ಯೊರ್ದನ್ ಹೊಳೆಯ ಪಶ್ಚಿಮದಲ್ಲಿ ಮೂರು ಮತ್ತು ಪೂರ್ವದಲ್ಲಿ ಎರಡು. ಪಶ್ಚಿಮದಲ್ಲಿ ಇದ್ದವುಗಳು, -

*a. ಗಲಿಲಾಯ,* ಉತ್ತರದಲ್ಲಿ, ಜನಸಂಖ್ಯೆಯು ಪ್ರಾಂತೀಯವಾಗಿದ್ದು, ಸಂಸ್ಕೃತಿಯಿಲ್ಲದವರು, ಮುಖ್ಯವಾಗಿ ಯೆಹೂದ್ಯರು, ಆದಾಗ್ಯೂ ದೊಡ್ಡ ಅನ್ಯ ಜನರ ಅಂಶವಿತ್ತು. ಕಪೆರ್ನೌಮ ಮುಖ್ಯ ಪಟ್ಟಣವಾಗಿತ್ತು, ಗಲಿಲಾಯ ಸಮುದ್ರದ ಸುತ್ತಲಿನ ಪ್ರದೇಶವು ಪಟ್ಟಣಗಳಿಂದಲೂ ಗ್ರಾಮಗಳಿಂದಲೂ ತುಂಬಿಕೊಂಡಿತ್ತು.

*b. ಯೂದಾಯ,* ದಕ್ಷಿಣದಲ್ಲಿ, ಹೆಚ್ಚು ಶುದ್ಧವಾಗಿ ಯೆಹೂದ್ಯರು, ಸಂಸ್ಕೃತಿಯುಳ್ಳವರು ಮತ್ತು ಶ್ರೀಮಂತಿಕೆಯುಳ್ಳವರು. ಇದು ದಾವೀದನ ಮತ್ತು ಯೇಸುವಿನ ಜನನದ ಸ್ಥಳದಂತೆ ಬಿಟ್ಟರೆ ಮಹತ್ವವಿಲ್ಲದ ಬೇತ್ಲೆಹೇಮನ್ನು ಒಳಗೊಂಡಿತ್ತು; ಕೈಸರಯ,

ರೋಮನ್ ರಾಜಧಾನಿ, ದೊಡ್ಡ ಹೆರೋದನಿಂದ ಕಟ್ಟಲ್ಪಟ್ಟಿದ್ದು ಮತ್ತು *ಯೆರೂಸಲೇಮ,* ವಿಶಾಲವಾಗಿ ಚದರಿಹೋದ ಕುಲದ ಅಗ್ನಿಕುಂಡದ ಕಲ್ಲು ಮತ್ತು ಜನಾಂಗಿಕ ಹಾಗೂ ಧಾರ್ಮಿಕ *ಹೃದಯ.*

*c. ಸಮಾರ್ಯ,* ಕೇಂದ್ರದಲ್ಲಿ, ಮಿಶ್ರಕುಲದವರು ಮತ್ತು ಧರ್ಮದವರು, ತಮ್ಮ ಯೆಹೂದಿ ಸೆರೆಯವರನ್ನು ತೀವ್ರವಾಗಿ ದ್ವೇಷಿಸಲ್ಪಡುತ್ತಿದ್ದವರು, ಮತ್ತು ದ್ವೇಷಿ ಸುತ್ತಿದ್ದವರು. ಸುಖರ ಎಂಬುದು ಪುರಾತನ ಶೆಖೆಮ್, ಇದು ಪುರಾತನ ಸಮಾರ್ಯರ ದೇವಾಲಯದ ಸ್ಥಳವಾಗಿತ್ತು, ಅತಿದೊಡ್ಡ ಆಸಕ್ತಿಯ ಸ್ಥಳವಾಗಿತ್ತು.

ಯೊರ್ದನಿನ ಪೂರ್ವದಿಕ್ಕಿನಲ್ಲಿದ್ದ ಜಿಲ್ಲೆಗಳು, -

*d. ಪೆರೆಯ,* ದಕ್ಷಿಣದಲ್ಲಿ, ಈ ಪ್ರದೇಶದ ಜನಸಂಖ್ಯೆಯು ಮುಖ್ಯವಾಗಿ ಯೆಹೂದ್ಯ ರಾಗಿದ್ದರು.

*e. ಯೊರ್ದನಿನ* ಪೂರ್ವದಲ್ಲಿ ಉತ್ತರದಲ್ಲಿಯ ಜಿಲ್ಲೆಗೆ ಯೋಗ್ಯ ಹೆಸರಿರಲಿಲ್ಲ. ಅದು ಕೆಲವು ಸಲ ದೆಕಪೊಲಿ ಎಂದು (ಹತ್ತು ಪಟ್ಟಣಗಳ ಜಿಲ್ಲೆ) ಕರೆಯಲ್ಪಡುತ್ತಿತ್ತು; ಆದರೆ ದೆಕಪೊಲಿಯು ಕೇವಲ ದಕ್ಷಿಣ ಭಾಗವನ್ನು ಮಾತ್ರ ಒಳಗೊಂಡಿತ್ತು, ಅದು ಹೆಚ್ಚಾಗಿ ಬಾಷಾನಿನ ಪುರಾತನ ರಾಜ್ಯಕ್ಕೆ ಸರಿ ಹೋಲುತ್ತದೆ, ಆದುದರಂದ ಅನೇಕರು *ಬಾಷಾನ್ ಜಿಲ್ಲೆ* ಎಂದು ಕರೆದರು, ಇದು ಫಿಲಿಪ್ಪನ ಟೆಟ್ರಾರ್ಕಿಯನ್ನು ರಚಿಸಿತ್ತು. ಜನಸಂಖೆಯು ಹೆಚ್ಚಾಗಿ ಕುಲದಲ್ಲಿ ಅನ್ಯರಾಗಿದ್ದು, ಧರ್ಮದಲ್ಲಿ ಅನ್ಯರಾಗಿದ್ದರು. ಯೇಸುವಿನ ಸೇವೆಯು ಎಲ್ಲಾ ಐದು ಜಿಲ್ಲೆಗಳಲ್ಲಿ ವಿಸ್ತರಿಸಲ್ಪಟ್ಟಿತು, ಆದರೆ ಆಸಕ್ತಿಯುಳ್ಳ ಕೇಂದ್ರಗಳು ಮುಖ್ಯವಾಗಿ ಯೂದಾಯ ಮತ್ತು ಗಲಿಲಾಯದಲ್ಲಿ ಇದ್ದವು.

**3. ಪಾಲೆಸ್ತೀನನ್ನು ಆಳಿದವರು.**-*a. ರೋಮನ್ ಚಕ್ರವರ್ತಿಗಳು.*-ರೋಮ್‌ದ ಚಕ್ರವರ್ತಿಗಳ ಅಧೀನತೆಯಲ್ಲಿ ಸ್ಥಳಿಕ ಅಧಿಕಾರಿಗಳಿಂದ ಪಲೆಸ್ತೀನ ದೇಶವು ಆಳಲ್ಪಟ್ಟಿತು. ಕ್ರಿಸ್ತನ ಸಮಯದಲ್ಲಿ ಚಕ್ರವರ್ತಿಗಳಾಗಿದ್ದವರು: ಆಕ್ಟಾವಿಯಸ್ (ಆಗಸ್ಟ್‌ಸ್) ಸೀಜರ್ (ಕ್ರಿ.ಪೂ. 31-ಕ್ರಿ.ಶ. 14) ಮತ್ತು ತೆಬೆರಿಯಸ್ (ಕ್ರಿ.ಶ. 14-37). ಹೊಸ ಒಡಂಬಡಿಕೆಯ ಚರಿತ್ರೆಯಲ್ಲಿ ಮಹತ್ವವುಳ್ಳ ಅನಂತರದ ಚಕ್ರವರ್ತಿಗಳು - ಕ್ಲಾಡಿಯಸ್ (ಕ್ರಿ.ಶ. 41-54), ನೀರೋ (ಕ್ರಿ.ಶ. 54-68) ಮತ್ತು ವೆಸ್ಪಾನಿಯನ್ (ಕ್ರಿ.ಶ. 69-79).

*b. ಸ್ಥಳಿಕ ಆಡಳಿತಗಾರರು.*-ಸ್ಥಳಿಕ ರಾಜಕೀಯವನ್ನು ಹೇಗೆ ಸಂಕ್ಷೇಪಿಸಬಹುದು: (1) ಮಹಾ ಹೆರೋದನ ಸಾಮ್ರಾಜ್ಯ - ಮಹಾ ಹೆರೋದನು ಆನುವಂಶಿಕವಾಗಿ, ಅಧೀನನಾಗಿದ್ದರೂ, ಮೇಲೆ ಹೇಳಿದ ಎಲ್ಲಾ ಐದೂ ಜಿಲ್ಲೆಗಳಿಗೆ ಕ್ರಿ.ಪೂ. 4ರಲ್ಲಿ ತನ್ನ ಮರಣದ ವರೆಗೆ ಅರಸನಾಗಿ ಆಳಿದನು.[1] (2) ದ ಟೆಟ್ರಾರ್ಕೀ (ನಾಲ್ವರ ಆಡಳಿತೆ), ಕ್ರಿ.ಪೂ. 4-ಕ್ರಿ.ಶ. 41. ಹೆರೋದನ ರಾಜ್ಯವು ಅವನ ಮೂರು ಗಂಡುಮಕ್ಕಳಲ್ಲಿ ಹಂಚಲ್ಪಟ್ಟಿತು. ಅರ್ಖೆಲಾಮನು (ಮತ್ತಾಯ 2:22) ಯೂದಾಯ ಮತ್ತು ಸಮಾರ್ಯವನ್ನು ಪಡೆದು ಕೊಂಡನು. ಕ್ರಿ.ಶ. 6ರಲ್ಲಿ ಅವನು ಚಕ್ರವರ್ತಿಯ ಅವಕೃಪೆಗೆ ಒಳಗಾದನು, ಮತ್ತು ಅವನ ರಾಜ್ಯವು ಚಕ್ರಾಧಿಪತ್ಯದ ರಾಜ್ಯಪಾಲರ ಸರಣಿಯ ಕೆಳಗೆ ಇಡಲ್ಪಟ್ಟಿತ್ತು, ಅವರಲ್ಲಿ ಪೊಂತಿ ಪಿಲಾತನು ಆರನೆಯವನು. ಅಂತಿಪಸ್ (ಉಪರಾಜನಾದ ಹೆರೋದನು, ಮತ್ತಾಯ 14:3) ಗಲಿಲಾಯ ಮತ್ತು ಪೆರೆಯಗಳನ್ನು ಸ್ವಾಸ್ತ್ಯವಾಗಿ ಪಡೆದನು. ಫಿಲಿಪ್ಪನು (ಲೂಕ 3:1) ಭಾಷಾನ ಜಿಲ್ಲೆಯ ಉಪರಾಜನಾದನು. ನಾಲ್ಕನೆಯ ರಾಜ್ಯವು ಲೂಕ 3:1ರಲ್ಲಿ ನಮೂದಿಸಲ್ಪಟ್ಟಿದೆ. ಲಿಸಾನಿಯಸನು ಮಹಾ ಹೆರೋದನ ಕುಟುಂಬದಲ್ಲಿ ಒಬ್ಬನಾಗಿರಲಿಲ್ಲ. ಮತ್ತು ಅಬಿಲೆನೆಯು ಮಹಾ ಹೆರೋದನ ಸಮ್ರಾಜ್ಯಗಳ ಹೊರಗೆ ಇದ್ದನು. (3) ಹೆರೋದ ಅಗ್ರಿಪ್ಪ Iನ ರಾಜ್ಯ., ಕ್ರಿ.ಶ. 41-44.[2] ಹೆರೋದ ಅಗ್ರಿಪ್ಪನು

(ಅಪೊಸ್ತಲರ ಕೃತ್ಯಗಳು 12:1-23) ಮಹಾ ಹೆರೋದನ ಮೊಮ್ಮಗನು. ಚಕ್ರವರ್ತಿ ಕಾಲಿಗುಲಾನ ಮೆಚ್ಚಿಕೆಯಿಂದ, ಇಡೀ ಪಾಲೆಸ್ತಾನವು ಅವನ ಆಳ್ವಿಕೆಯಲ್ಲಿ ಒಂದುಗೂಡಿಸಲ್ಪಟ್ಟಿತು, ಇದಲ್ಲಿ ಅಬಿಲೇನೆ ಸೇರಿಸಲ್ಪಟ್ಟಿರುವದಿಲ್ಲ; ಹೀಗೆ ಅವನು ಸೊಲೊಮೋನನ ನಂತರ ಯಾವುದೇ ಇತರ ಯೆಹೂದಿ ಅರಸನು ಆಳಿದ ಹೆಚ್ಚು ವಿಶಾಲವಾದ ಕ್ಷೇತ್ರವನ್ನು ಆಳಿದನು. (4) ಅರಸ ಅಗ್ರಿಪ್ಪ II., ಕ್ರಿ.ಶ. 44-66.[3] ಹೆರೋದ ಅಗ್ರಿಪ್ಪನ ಮರಣದ ನಂತರ ಒಂದು ಹೊಸ ವಿಭಜನೆಯು ಮಾಡಲ್ಪಟ್ಟಿತು. ಅವನ ಮಗ, ಹೆರೋದ ಅಗ್ರಿಪ್ಪ II., ಸೆರೆ (ಅಪೊಸ್ತಲರ ಕೃತ್ಯಗಳು 26:2), ಫಿಲಿಪ್ಪ ಮತ್ತು ಲಿಸಿಯಾನಿಯಾಸ ಎರಡು ಹಳೇ ಉಪರಾಜ್ಯಗಳು ಕೊಡಲ್ಪಟ್ಟವು. ಅವುಗಳ ಮೇಲೆ ಅವನು ಕ್ರಿ.ಶ. 70ರಲ್ಲಿ ಯೆರೂಸಲೇಮ ಹಾಗೂ ಯೆಹೂದಿ ಪ್ರಾಂತ್ಯವು ನಾಶವಾಗುವವರೆಗೆ ಆಳಿದನು. ಸೌಜನ್ಯಕ್ಕಾಗಿ ಮಾತ್ರವೇ ಅವನು "ಕಿಂಗ್ ಅಗ್ರಿಪ್ಪ" ಎಂದು ಕರೆಯಲ್ಪಟ್ಟನು. ಪಲೆಸ್ತೀನಿನ ಇತರ ಪ್ರಾಂತ್ಯಗಳು ಪೊಂತಿ ಪಿಲಾತನ ಸಮಯದಲ್ಲಿದ್ದಂತೆ ರಾಜ್ಯಪಾಲರ ಕೈಕೆಳಗೆ ಇಡಲ್ಪಟ್ಟಿದ್ದವು, ಹೊಸ ಒಡಂಬಡಿಕೆಯಲ್ಲಿ ಹೆಸರು ಹೇಳಲ್ಪಟ್ಟವರು: ಫೇಲಿಕ್ಸ್, ಕ್ರಿ.ಶ. 53-60 (ಅಪೊಸ್ತಲರ ಕೃತ್ಯಗಳು 23; 24) ಮತ್ತು ಫೆಸ್ತನು, ಕ್ರಿ.ಶ. 60-62 (ಅಪೊಸ್ತಲರ ಕೃತ್ಯಗಳು 24-26).

---

ಟಿಪ್ಪಣಿಗಳು

[1]ಕ್ರಿಸ್ತನ ಜನನದಿಂದ ಸಮಯವನ್ನು ಎಣಿಸುವ ನಮ್ಮ ಪದ್ಧತಿಯು ನಾಲ್ಕನೆಯ ಶತಮಾನದಲ್ಲಿ ಬಂದಿತು. ಸನ್ಯಾಸಿ, ಡಿಯೊನಿಸಿಯಸ್ ಎಕ್ಸಿಗ್ಯೂಸ್, ದಿನಾಂಕವನ್ನು ಎಣಿಸಿದವನು, ನಾಲ್ಕು ವರ್ಷಗಳ ತಪ್ಪನ್ನು ಮಾಡಿದನು. ಹೆರೋದನ ಮರಣವು ಬಹುಶಃ ಕ್ರಿಸ್ತನ ಜನನದ ಒಂದು ವರ್ಷದೊಳಗಾಗಿ ಆಗಿರಬೇಕು. [2]ಕ್ರಿ.ಶ. 37ರಲ್ಲಿ ಹೆರೋದ ಅಗ್ರಿಪ್ಪ Iನು ಅರಸ ಎಂಬ ನಾಮಾಂಕಿತವನ್ನು ಹೊಂದಿದನು, ಪಾಲೆಸ್ತೀನಿನ ಈಶಾನ್ಯ ದಿಕ್ಕಿನಲ್ಲಿಯ ಕ್ಷೇತ್ರಗಳು ಅವನಿಗೆ ಕೊಡಲ್ಪಟ್ಟವು. ಕ್ರಿ.ಶ. 39ರಲ್ಲಿ ಗಲಿಲಾಯ ಮತ್ತು ಪೆರೆಯಗಳು ಅವನ ರಾಜ್ಯಕ್ಕೆ ಕೂಡಿಸಲ್ಪಟ್ಟವು. ಕ್ರಿ.ಶ. 41ರಲ್ಲಿ ಅವನಿಗೆ ಯೂದಾಯ ಮತ್ತು ಸಮಾರ್ಯಗಳು ಕೊಡಲ್ಪಟ್ಟವು. ಮೆರ್ರಿಲ್ ಸಿ. ಟನ್ನಿಯಂಥ ಕೆಲವು ಗ್ರಂಥಕರ್ತರು ಅವನ ಆಳ್ವಿಕೆಯ ದಿನಾಂಕವನ್ನು ಕ್ರಿ.ಶ. 37-44 ಎಂದು ಹೇಳುತ್ತಾರೆ: Merrill C. Tenney, *New Testament Survey* (Grand Rapids, Mich.: Wm. B. Eerdmans Publishing Co., 1985); Robert Gundry, *A Survey of the New Testament* (Grand Rapids, Mich.: Zondervan, 1970); and Robert Gromacki, *New Testament Survey* (Grand Rapids, Mich.: Baker Book House, 1974). [3]ಕ್ರಿ.ಶ. 66, ರೋಮಕ್ಕೆ ವಿರುದ್ಧವಾಗಿ ಯೆಹೂದಿ ಯುದ್ಧ ಪ್ರಾರಂಭವಾದದ್ದನ್ನು ಗುರುತಿಸುತ್ತದೆ. ಇದು ರೋಮನ್ ಜನರಲ್ ಟೈಟಸನು ಯೆರೂಸಲೇಮಿನೊಳಗೆ ತನ್ನ ಮಾರ್ಗಮಾಡಿಕೊಂಡು ಪಟ್ಟಣವನ್ನು ಕ್ರಿ.ಶ. 70ರಲ್ಲಿ ನಾಶಪಡಿಸುವದಕ್ಕೆ ಕಾರಣವಾಯಿತು.

© 2009 Truth for Today